# ಈ ಜಗತ್ತು ಕಂಡ ಬುದ್ಧ

ಸಂಗನಾಳಮಠ
ಯು.ಎನ್.

ಬುದ್ಧನ ಜೀವನ ಸಂದೇಶಗಳು ಶತಮಾನಗಳು ಕಳೆದರೂ ನಿರಂತರ ಸ್ಫೂರ್ತಿಯ ಸೆಲೆಯಾಗಿ ಉಳಿದಿವೆ, ತಮ್ಮ ಪ್ರಭಾವವನ್ನು ಗಾಢವಾಗಿಸುತ್ತಲೇ ಬೆಳೆದಿವೆ. ಲೇಖಕರು ಬುದ್ಧನ ವಿಚಾರಗಳನ್ನು ಸರಳವಾಗಿ ತಿಳಿಸಿದ್ದಾರೆ.

"ತಾನು ಕಂಡುಕೊಂಡ, ಅರ್ಥಮಾಡಿಕೊಂಡ ವಿಷಯಗಳನ್ನು ಇತರರಿಗೂ ಬೋಧಿಸಿ ಕಾರ್ಯರೂಪಕ್ಕೆ ತರುವಂತೆ ಮಾಡಿದವನು, ನುಡಿದಂತೆ ನಡೆದವನು, ನಡೆದಂತೆ ನುಡಿದ ಕರ್ಮಯೋಗಿ ಬುದ್ಧ."

—ಸ್ವಾಮಿ ವಿವೇಕಾನಂದ

"ಅತ್ಯಂತ ನೋವುಂಡು ದುಃಖಪಡುತ್ತಿದ್ದ ಬಡಜನರ ಬಾಳಿನಲ್ಲಿ ಬುದ್ಧನ ಧ್ವನಿ ಸಾಂತ್ವನ ತಂದಿತು. ಅದೇ ಧ್ವನಿ ದಾರಿತಪ್ಪಿದ ದುಷ್ಟರನ್ನು ಉತ್ತಮ ಮಾನವರನ್ನಾಗಿ ಪರಿವರ್ತಿಸಿತು. ದನಿಯಿಲ್ಲದವರಿಗೆ ದನಿ ನೀಡಿತು. ಒಡೆದು ಹಂಚಿಹೋಗಿದ್ದವರನ್ನು ಒಂದುಗೂಡಿಸಿತು. ಅಜ್ಞಾನಿಗಳನ್ನು ಜ್ಞಾನಮಾರ್ಗಕ್ಕೆ ಕೊಂಡೊಯ್ದಿತು. ಕೆಳಸ್ತರದಲ್ಲಿದ್ದವರನ್ನು ಮೇಲ್ಮಟ್ಟಕ್ಕೇರಿಸಿತು."

—ಮ್ಯಾಕ್ಸ್ ಮುಲ್ಲರ್

"ನಾನು ಯಾವುದೇ ಧರ್ಮದ ಅನುಯಾಯಿಯಲ್ಲ. ನನಗೊಂದು ಧರ್ಮ ಬೇಕೆನಿಸಿದರೆ ಅದು ಬುದ್ಧನ ಧರ್ಮ."

— ಆಲ್ಬರ್ಟ್ ಐನ್‌ಸ್ಟೈನ್

"ಜ್ಞಾನದ ವಿಚಾರವಿರಲಿ ಅಥವಾ ಪಾವಿತ್ರ್ಯತೆಯ ವಿಚಾರವಿರಲಿ; ಏಸುಕ್ರಿಸ್ತನು ಚರಿತ್ರೆಯಲ್ಲಿ ಕಾಣುವ ಇತರ ವ್ಯಕ್ತಿಗಳಿಗಿಂತ ಎತ್ತರದ ಸ್ಥಾನದಲ್ಲಿದ್ದಾನೆಂದು ನನಗೆ ಅನಿಸುವುದಿಲ್ಲ. ಆದರೆ ಬುದ್ಧನನ್ನು, ಏಸುಕ್ರಿಸ್ತನಿಗಿಂತಲೂ ಎತ್ತರದ ಸ್ಥಾನದಲ್ಲಿ ಇಡಲು ನಾನು ಬಯಸುತ್ತೇನೆ."

—ಬರ್ಟ್ರಂಡ್ ರಸೆಲ್



**ಭಾ**ರತದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯು ಪುರೋಹಿತಶಾಹಿಯ ಪ್ರಾಬಲ್ಯದಿಂದ ಹಾಗೂ ದೇವರು ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯಿಂದ ಅರ್ಥಹೀನವಾಗಿ ಪರಿಣಮಿಸಿತ್ತು. ಇವು ನೈಜ ಧರ್ಮವನ್ನು ಮರೆಮಾಡಿದ ಸಂದರ್ಭದಲ್ಲಿ ಬುದ್ಧ ಕ್ರಾಂತಿಕಾರನಾಗಿ ಬಂದ. ಈ ನಿಟ್ಟಿನಲ್ಲಿ ನೋಡಿದಾಗ ಬುದ್ಧನೇ ಪ್ರಥಮ ಸಮಾಜ ಪರಿವರ್ತಕ. ಆದರೆ ಸಮಾನತೆಯನ್ನೇ ಆಧಾರವಾಗಿಸಿಕೊಂಡಿದ್ದ ಈ ಧರ್ಮ ಭಾರತದಲ್ಲಿ ವ್ಯಾಪಕವಾಗಿ, ಸ್ಥಿರವಾಗಿ ಉಳಿಯದೆ ಇತರ ದೇಶಗಳಿಗೆ ವಲಸೆ ಹೋಗಿದ್ದು ಒಂದು ವೈಪರೀತ್ಯ ಎಂದು ಹೇಳಬಹುದು. ಧರ್ಮ ಎಂದರೆ ಬದುಕಿನ ಕೆಡಕುಗಳಿಂದ ಬಿಡುಗಡೆ ಪಡೆಯುವುದಕ್ಕೆ ಮತ್ತು ಜೀವನದ ಒಳಗೆ ಹೊರಗೆ ಏನಿದೆ ಎಂಬುದರ ಅರಿವನ್ನು ಪಡೆಯುವುದಕ್ಕೆ ಇರುವ ಮಾರ್ಗ ಎಂದ ಬುದ್ಧದೇವನು ಅತ್ಯಂತ ಸರಳ ಮಾತುಗಳಲ್ಲಿ ಧರ್ಮದ ಮರ್ಮವನ್ನು ವಿವರಿಸಿ ಮುಕ್ತಿಯ ಅಪೂರ್ವ ಹಾದಿಯನ್ನು ತೋರಿಸಿದ. ಬುದ್ಧ ಕ್ರಿಪೂ. ೫೬೩ರಲ್ಲಿ ಜನಿಸಿ ಕ್ರಿಪೂ.೪೮೩ರಲ್ಲಿ ಮರಣಿಸಿದನೆಂದು ಹೇಳುತ್ತಾರೆ. ಪುರಾಣ–ಭಾರತ ಕೋಶದಲ್ಲಿ ಬುದ್ಧನನ್ನು ದಶಾವತಾರಗಳಲ್ಲಿ ಒಂಭತ್ತನೆಯವನೆಂದೂ ಬೌದ್ಧಧರ್ಮ ಸ್ಥಾಪಕನೆಂದೂ ಬರೆದಿದೆ.

ಬುದ್ಧ ತನ್ನ ಬೋಧನೆಗಳನ್ನು ಅಂದಿನ ಆಡುಮಾತು 'ಪಾಲಿ' ಭಾಷೆಯಲ್ಲಿ ಬೋಧಿಸಿದನು. ವಿಷಯ ಎಷ್ಟೇ ಗಹನವಾಗಿದ್ದರೂ ಜನಸಾಮಾನ್ಯರಲ್ಲಿ ಬಳಕೆಯಾಗುತ್ತಿದ್ದ ರೂಪಕ ಉಪಮಾನಗಳನ್ನು ಬಳಸಿಕೊಂಡು ಸುಲಭವಾಗಿ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ಬೋಧಿಸುತ್ತಿದ್ದುದರಿಂದ ಜನ ಬಹುಬೇಗ ಬುದ್ಧನನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಬುದ್ಧ ತನ್ನ ಅನುಯಾಯಿಗಳಿಗೆ ಕುರುಡು ನಂಬಿಕೆಯಿಂದ ನಡೆಯಿರಿ ಎಂದು ಹೇಳಲಿಲ್ಲ. ಯಾವೊಂದು ಮತ ಸಿದ್ಧಾಂತವನ್ನೂ ಪ್ರತಿಪಾದಿಸಲಿಲ್ಲ. ಬುದ್ಧ ತಾನು ದೇವನೂ ಅಲ್ಲ, ಇನ್ನೊಬ್ಬರನ್ನು ರಕ್ಷಿಸುವ ರಕ್ಷಕನೂ ಅಲ್ಲ. ಸ್ವಪ್ರಯತ್ನದಿಂದ ಮಾತ್ರ ದುಃಖದಿಂದ ಬಿಡುಗಡೆ ಮಾಡಿಕೊಳ್ಳಬಹುದು ಎಂದು ವಿವರಿಸಿದ; ಸ್ವಾವಲಂಬನೆಗೆ ಆದ್ಯತೆ ನೀಡಿದ.

ಹುಟ್ಟು, ಸಾವು, ಭವಾಂತರ—ಇವೆಲ್ಲ ದುಃಖ ಎಂದು ಅರಿತುಕೊಳ್ಳುವುದೇ ದುಃಖದ ಶಮನಕ್ಕೆ ಮೂಲಮಾರ್ಗ. ಹಾಗೆ ಅರಿತುಕೊಂಡಮೇಲೆ ದುಃಖದ ಕಾರಣವನ್ನು ನಿರ್ಮೂಲ ಮಾಡಿ ನಿರ್ಮಲ ಜ್ಞಾನ ಪಡೆಯುವುದೇ ಬಿಡುಗಡೆ. ಇದೇ ಬುದ್ಧನ ಬೋಧೆ. ಜನಕಲ್ಯಾಣಕ್ಕಾಗಿ ತಾನು ಪಡೆದ ಜ್ಞಾನವನ್ನು ಈತ ಹೇಳುತ್ತ ಬಂದ. ಆದ್ದರಿಂದ ಬುದ್ಧ ದೇವನೂ ಅಲ್ಲ, ಪ್ರವಾದಿಯೂ ಅಲ್ಲ, ಅವತಾರ ಪುರುಷನೂ ಅಲ್ಲ. ದೇವ–ಮಾನವನೆಂದೂ ಜನಸಾಮಾನ್ಯರ ಗುರು ಎಂದೂ ಪ್ರಸಿದ್ಧನಾದ. ಪ್ರಾಪಂಚಿಕ ಬಂಧನಗಳಿಂದ ಜೀವಿಗಳನ್ನು ಮುಕ್ತಗೊಳಿಸುವ ಸತ್ಯಾನ್ವೇಷಕನಾಗಿಯೇ ಉಳಿದ ಬುದ್ಧ.

ಬುದ್ಧ ತನ್ನ ಧರ್ಮಪ್ರಸಾರದ ಬಗ್ಗೆ ಹೇಳಿದ್ದು ಹೀಗೆ: "ಎಲ್ಲ ನಾಡುಗಳಿಗೂ ಹೋಗಿ ಇದನ್ನು ಸಾರಿ—ಬಡವ ಬಲ್ಲಿದರೆಲ್ಲ ಒಂದು. ಎಲ್ಲ ಜಾತಿಗಳೂ ಈ ಧರ್ಮದಲ್ಲಿ ಒಂದಾಗುತ್ತವೆ. ನದಿಗಳು ಸಮುದ್ರದಲ್ಲಿ ಹೇಗೋ ಹಾಗೆ." ಇದು ಈಗಿನ ಕಾಲದಲ್ಲಿ ಪ್ರಸಿದ್ಧವಾಗಿರುವ ಸರ್ವೋದಯ ತತ್ವ

❈ ❈ ❈

ಬುದ್ಧನು ಕ್ರಿ.ಪೂ.೫೬೩ರಲ್ಲಿ ಜನಿಸಿದಾಗ ಹೊರಗೆ ಸಣ್ಣ ಸಣ್ಣ ರಾಜ್ಯಗಳ ನಡುವೆ ಯುದ್ಧ ನಡೆಯುತ್ತಿತ್ತು. ಬಿಲ್ಲು–ಬಾಣಗಳ, ಕುದುರೆಗಳ ಖುರಪುಟದ ಸಪ್ಪಳದ ಮಧ್ಯೆ ಬೆಳೆದ ಬುದ್ಧನೇಕೆ ಅಹಿಂಸಾಪ್ರಿಯನಾದ? ತ್ಯಾಗಿಯಾದ? ಶ್ರೀಮಂತ ಕುಟುಂಬದಲ್ಲಿ ಬೆಳೆದು ಉನ್ನತ ಶಿಕ್ಷಣ ಹೊಂದಿದ್ದ ಗಾಂಧಿಯೂ ಸಹ ಮಹಾತ್ಯಾಗಿಯಾಗಲಿಲ್ಲವೇ? ವಂಶವಾಹಿನಿಯಾಗಲಿ, ಅವರ ಸುತ್ತಲಿನ ಪರಿಸರವಾಗಲಿ ಅವರ ಮೇಲೆ ಪ್ರಭಾವ ಸಾಧಿಸಿದ್ದರೆ ಮಹಾನ್ ವ್ಯಕ್ತಿಗಳಾಗುತ್ತಿರಲಿಲ್ಲ ಇವರು. ಎಲ್ಲವನ್ನೂ ಮೆಟ್ಟಿ ನಿಂತ ಧೀರರು ಇವರು. ಜನ ಇವರಿಬ್ಬರನ್ನೂ ಹಿಂಬಾಲಿಸಿದರು, ಬೆಂಬಲಿಸಿದರು, ಅನುಯಾಯಿಗಳಾದರು. ಇಬ್ಬರೂ ಸ್ವಾತಂತ್ರ್ಯ ಸಮಾನತೆಗೆ ಹೋರಾಡಿ ಯಶಸ್ಸು ಕಂಡರು.

ಬುದ್ಧ – ಯುದ್ಧ ಇವೆರಡೂ ವಿರುದ್ಧ ಪದಗಳು. ಬುದ್ಧ ಶಾಂತಿ, ಅಹಿಂಸೆ, ಪ್ರೀತಿ, ಸಮಾನತೆ ಹಾಗೂ ವೈಚಾರಿಕತೆಗಳ ಸಂಕೇತ. ಯುದ್ಧವು ಹಿಂಸೆ, ರಕ್ತಪಾತ, ಅಶಾಂತಿ, ದ್ವೇಷ, ಆಕ್ರಮಣಗಳ ಸಂಕೇತ. ಯುದ್ಧ ಎಂಬ ಪದವು ದೇಶಗಳ ಪರಸ್ಪರ ಆಕ್ರಮಣಕಾರಿ ನೀತಿಯನ್ನು ಒಳಗೊಂಡಿದೆ. ಜಾತಿ, ಮತ, ದೇವರು, ದೇವಸ್ಥಾನ, ಕಾರಣಗಳಿಂದ ಉಂಟಾಗುವ ಆಂತರಿಕ ಘರ್ಷಣೆಗಳಿಂದಲೂ ಹಿಂಸೆ, ಕ್ರೌರ್ಯ, ಜೀವಹತ್ಯೆ, ನಾಶಗಳಾಗುತ್ತಿದ್ದು, ಇವೆಲ್ಲ ಯುದ್ಧಗಳೇ. ಬುದ್ಧನ ಪ್ರಕಾರ ಇವೆಲ್ಲ ಅಸ್ವಸ್ಥ ಮನೋವಿಕಾರಗಳು. ಹಿಂಸೆ ಎಂದಿಗೂ ಅಶಾಂತಿಗೆ ಕಾರಣ.

ಬುದ್ಧನಿಂದ, ಗಾಂಧಿಯಿಂದ ಪ್ರಭಾವಿತರಾದವರು ಎಷ್ಟೋ ಜನ. ಕತ್ತಿ ಹಿರಿಯುತ್ತಿದ್ದ ಕ್ಷತ್ರಿಯರು ಬುದ್ಧನಿಂದಾಗಿ ಶಾಂತಿಗೆ ಶರಣಾದರು. ಕ್ರಿಪೂ.೨೬೧ರಲ್ಲಿ ಅಶೋಕ ಕತ್ತಿಯನ್ನು ಕೆಳಗಿಳಿಸಿ ಬೌದ್ಧಧರ್ಮ ಸ್ವೀಕರಿಸಿದ. ಜಗತ್ತಿನೆಲ್ಲೆಡೆಗೆ ಬೌದ್ಧ ಸಂನ್ಯಾಸಿಗಳನ್ನು ಕಳಿಸಿ ಮತಪ್ರಚಾರ ಮಾಡಿದ. ಈಜಿಪ್ತ್, ಬ್ರಿಟನ್, ಪ್ಯಾಲೆಸ್ಟೈನ್‌ಗಳಲ್ಲೂ ಈ ಧರ್ಮ ಪ್ರಚಾರವಾಯಿತು. ಉತ್ತರ ಭಾರತದಲ್ಲಿ ಅಲೆಗ್ಸಾಂಡರ್‌ನ ಮಾಂಡಲಿಕ ಮೆನಾಂಡ್ರೊಸ್ ಬೌದ್ಧಧರ್ಮ ಸ್ವೀಕರಿಸಿದ. ಈಶಾನದ ಚಕ್ರವರ್ತಿ ಕನಿಷ್ಕ, ಅಶೋಕನ ಮಕ್ಕಳಾದ ಮಹೇಂದ್ರ, ಸಂಘಮಿತ್ರೆಯರೂ ಬೌದ್ಧಧರ್ಮ ಸ್ವೀಕರಿಸಿದರು. ಅಶೋಕನ ಮಕ್ಕಳು ಶ್ರೀಲಂಕಾದಲ್ಲಿ ಬೌದ್ಧಧರ್ಮ ನೆಲೆಸಲು ಕಾರಣರಾದರು. ಅಲ್ಲಿಂದ ಬರ್ಮಾ, ಮಲಯಾ, ಥಾಯ್‌ಲ್ಯಾಂಡ್, ಕಾಂಬೋಡಿಯಾಗಳಲ್ಲಿ ಈ ಧರ್ಮ ಪ್ರಸಾರವಾಯಿತು. ಕ್ರೈಸ್ತ ಧರ್ಮವೂ ಕೂಡ ಬೌದ್ಧಧರ್ಮದಿಂದ ಪ್ರಭಾವಿತವಾಗಿದೆ ಎಂದು ಸಂಶೋಧನೆಗಳಿಂದ ಸ್ಪಷ್ಟವಾಗಿ ತಿಳಿದುಬಂದಿದೆ.

ಬೌದ್ಧಧರ್ಮದಲ್ಲಿ ಹೀನಯಾನ, ಮಹಾಯಾನ, ವಜ್ರಯಾನ ಎಂಬ ಪ್ರಭೇದಗಳಿವೆ. ಹೀನಯಾನ ಪಂಥದ ಅನುಯಾಯಿಗಳು ಭಗವಾನ್ ಬುದ್ಧನ ಮೂಲ ಸಂದೇಶಗಳನ್ನು ಪ್ರಮಾಣವೆಂದು ಭಾವಿಸಿ, ಅವುಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲೂ ಇಷ್ಟ ಪಡುವುದಿಲ್ಲ. ಬುದ್ಧನು ಇವರ ದೃಷ್ಟಿಯಲ್ಲಿ ಮಹಾತ್ಮ, ನಿವೃತ್ತಿ ಮಾರ್ಗದಲ್ಲಿ ನಡೆದ ಅರಹಂತ. ಅವನಂತೆ ಆಗುವುದೇ ಇವರ ಆದರ್ಶ. ಮಹಾಯಾನ ಪಂಥದವರು ಬುದ್ಧನನ್ನು ಅವತಾರಪುರುಷನೆಂದು ಭಾವಿಸುತ್ತಾರೆ, ಭಕ್ತಿಯಿಂದ ಆರಾಧಿಸುತ್ತಾರೆ. ಸಮನ್ವಯದ ಹಾದಿಯೇ ಉತ್ತಮವೆನ್ನುವ ಇವರು ಪ್ರವೃತ್ತಿಯೇ

ಪ್ರಧಾನವೆನ್ನುತ್ತಾರೆ. ಬೋಧಿಸತ್ವನಾಗುವುದು ಇವರ ಆದರ್ಶ. ವಜ್ರಯಾನ ಪಂಥದಲ್ಲಿ ತಾಂತ್ರಿಕ ಸಾಧನೆಗೆ ಪ್ರಾಧಾನ್ಯತೆಯಿದ್ದು ೮೪ ಜನ ಸಿದ್ಧರನ್ನು ಅವರು ಪೂಜಿಸುತ್ತಾರೆ. ಸಿದ್ಧರಾಗುವುದೇ ಈ ಪಥದ ಪ್ರವರ್ತಕರ ಆದರ್ಶ. ಮಹಾಯಾನ ಎಂದರೆ ಮಹಾಯಾತ್ರೆ. ಬುದ್ಧನು ಸ್ವತಃ ಪಾದಸಂಚಾರಿಯಾಗಿ ಉಪಮೆ–ರೂಪಕ–ಕಥೆಗಳ ಮೂಲಕ ಸಾಮಾನ್ಯ ಜನರಿಗೆ ಧರ್ಮಬೋಧೆ ಮಾಡುತ್ತಿದ್ದನು. ಬುದ್ಧನಿಂದ ಪ್ರಾರಂಭವಾದ ಈ ಯಾತ್ರೆ ಮಹಾಯಾನವಾಗಿ ಪರಿಣಮಿಸಿತು. ಚೀನಾದ ಕನ್‌ಫೂಶಿಯಸ್, ತಾವೋ ಪಂಥಗಳು ಸಹ ಈ ಧರ್ಮದಿಂದ ಪ್ರಭಾವಿತವಾದವುಗಳು. ಕೊರಿಯ, ಜಪಾನ್‌ನಲ್ಲಿ ಬೌದ್ಧಧರ್ಮ ಬೆಳೆಯಿತು. ಜಪಾನ್‌ನಲ್ಲಿ ಬೌದ್ಧಧರ್ಮದ ಅನುಯಾಯಿಗಳು ಅನೇಕರಿದ್ದಾರೆ. ಝೆನ್ ಸಾಹಿತ್ಯವೂ ಜಪಾನಿನ ಕೊಡುಗೆ. ತಿಬೆಟ್‌ನಲ್ಲಿ ಗುರು ಹಿಪ್ರೋಶೆ ನೇತೃತ್ವದಲ್ಲಿ ಬೌದ್ಧಧರ್ಮ ಬೆಳೆಯಿತು.

## ಬುದ್ಧ ಮತ್ತು ಭಾರತದ ಗಣರಾಜ್ಯ

೧೯೫೦ರಲ್ಲಿ ಭಾರತವು ಗಣರಾಜ್ಯವಾದಾಗ ಅಶೋಕ ಸ್ತಂಭದಲ್ಲಿದ್ದ ಸಿಂಹವನ್ನು ತನ್ನ ರಾಷ್ಟ್ರಲಾಂಛನವನ್ನಾಗಿ ಅಂಗೀಕರಿಸಿತು. ರಾಷ್ಟ್ರದ ಧ್ಯೇಯವಾಕ್ಯ 'ಸತ್ಯಮೇವ ಜಯತೇ'. ನಮ್ಮ ತ್ರಿವರ್ಣ ಧ್ವಜದ ಮಧ್ಯೆ ಧರ್ಮಚಕ್ರವಿದೆ. ಭಾರತದ ಧ್ವಜಕ್ಕೂ, ಧ್ಯೇಯವಾಕ್ಯಕ್ಕೂ, ಲಾಂಛನಕ್ಕೂ ಹಾಗೂ ಬುದ್ಧನಿಗೂ ಹತ್ತಿರದ ಸಂಬಂಧವಿದೆ. ರಾಷ್ಟ್ರಧ್ವಜದ ಮಧ್ಯೆ ಇರುವ ಚಕ್ರ ಅಶೋಕ ಚಕ್ರ ಅಥವಾ ಧರ್ಮಚಕ್ರ. ಈ ಚಕ್ರವನ್ನು ಸಾರನಾಥದಲ್ಲಿರುವ ಅಶೋಕಸ್ತಂಭದಿಂದ ತೆಗೆದುಕೊಳ್ಳಲಾಗಿದೆ. ಅಶೋಕಸ್ತಂಭ ದಲ್ಲಿರುವ ನಾಲ್ಕು ಸಿಂಹಗಳಲ್ಲಿ, ಮೂರು ಸಿಂಹಗಳನ್ನು ಮಾತ್ರ ಧ್ವಜದ ಲಾಂಛನದಲ್ಲಿ ಕಾಣುತ್ತೇವೆ. ಈ ಲಾಂಛನದಲ್ಲಿರುವ ಆನೆ, ಗೂಳಿ, ಕುದುರೆ, ಸಿಂಹಗಳಿಗೆ ಬೌದ್ಧರು ನಿರ್ದಿಷ್ಟ ಅರ್ಥಗಳನ್ನು ಕೊಡುತ್ತಾರೆ. ಈ ನಾಲ್ಕು ಪ್ರಾಣಿಗಳು ಕ್ರಮವಾಗಿ ಬುದ್ಧನ ಸ್ವರ್ಗಾವತರಣ, ಜನನ, ಮಹಾಭಿನಿಷ್ಕ್ರಮಣ ಮತ್ತು ಧರ್ಮಾದೇಶನ ಎಂಬ ನಾಲ್ಕು ಮಹಾಕ್ರಿಯೆಗಳ ಸಂಕೇತ ಎಂದು ಹೇಳಿದೆ. ಜಾತಕ ಕಥೆಗಳಲ್ಲಿ ಬುದ್ಧನು ಈ ನಾಲ್ಕು ಪ್ರಾಣಿಗಳ ಜನ್ಮವನ್ನು ತಾಳಿದ್ದನೆಂದು ಹೇಳಿದೆ. ಅಲ್ಲದೆ ಈ ನಾಲ್ಕು ಪ್ರಾಣಿಗಳು ಶೌರ್ಯಕ್ಕೆ ಹೆಸರಾಗಿವೆ.

ಚಕ್ರವು ಪ್ರಗತಿಯ, ಚಲನೆಯ ಸಂಕೇತ. ಮನುಷ್ಯನು ದಿನದ ೨೪ ಗಂಟೆಗಳ ಅರಿವನ್ನೂ ಹೊಂದಿದ್ದು ಪ್ರತಿ ಕ್ರಿಯೆಯ ಮಹತ್ವವನ್ನೂ ತಿಳಿದಿರಬೇಕು ಎಂದು ಚಕ್ರದ ೨೪ ಪಟ್ಟಿಗಳು ಸೂಚಿಸುತ್ತವೆ. ಈ ನಿಷ್ಠೆಯಿದ್ದರೆ ಮಾತ್ರ ವ್ಯಕ್ತಿಯು ನ್ಯಾಯವಂತನಾಗಿದ್ದು ಬುದ್ಧನ ತತ್ತ್ವಗಳನ್ನು ಅನುಸರಿಸಬಲ್ಲ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಡಾ. ಅಂಬೇಡ್ಕರ್ ಅವರು ಬೌದ್ಧಮತಕ್ಕೆ ಮತಾಂತರಗೊಂಡು ಇದು ಸಾಮಾಜಿಕ ನ್ಯಾಯವನ್ನೊದಗಿಸುವ ಮತವೆಂದು ಪ್ರಸಿದ್ಧಪಡಿಸಿದರು. ನಿಜವಾದ ಧರ್ಮವು ಚಲನಶೀಲತೆಯನ್ನು ಕಳೆದುಕೊಂಡಾಗ, ಮತೀಯ ರೂಪವನ್ನು ತಾಳಿ, ಶೋಷಣೆಯ ಸಾಧನವಾಗಿ ಪರಿಣಮಿಸುವುದರ ಕಡೆ ಡಾ. ಅಂಬೇಡ್ಕರರು ಸಮಾಜದ ಗಮನವನ್ನು ಸೆಳೆದರು. ತಮ್ಮ ಬದುಕಿನ ನಲವತ್ತು ವರ್ಷಗಳವರೆಗೆ ಮತೀಯ ಆಚಾರ–ವಿಚಾರ–ಪದ್ಧತಿಗಳನ್ನು ಪ್ರಶ್ನಿಸುತ್ತ, ಧಾರ್ಮಿಕ ಮುಖಂಡರನ್ನು ಸಹ ಚರ್ಚೆಗೆ ಎಳೆದು, ಮತೀಯ ವಿಧಿ ವಿಧಾನಗಳ ಅಮಾನವೀಯ ಅಂಶಗಳನ್ನು ಬಯಲಿಗಿಟ್ಟರು.

ಅರ್ಥಹೀನವಾದ ಪದ್ಧತಿಗಳಿಂದ ಶೋಷಿತರಾದ ಲಕ್ಷಾಂತರ ಜನರನ್ನು ಜಾಗೃತಗೊಳಿಸುವ ಕಾರ್ಯವನ್ನು ಮಾಡಿ ೧೯೫೬ರ ಅಕ್ಟೋಬರದಲ್ಲಿ ಅವರೊಂದಿಗೆ ಅಂಬೇಡ್ಕರರು ನಾಗಪುರದಲ್ಲಿ ಬೌದ್ಧಧರ್ಮ ಸ್ವೀಕರಿಸಿದರು. ದಲಿತರು, ಅಸ್ಪೃಶ್ಯರು ಎಂದು ದೂರ ಇಟ್ಟು ಸಾಮಾಜಿಕವಾಗಿ ಅವರನ್ನು ಶೋಷಣೆಗೊಳಪಡಿಸಿರುವ ಕಾರಣಗಳನ್ನು ತಿಳಿಸುತ್ತ ತಾವು ಬೌದ್ಧಧರ್ಮ ಸ್ವೀಕರಿಸಿದುದನ್ನು ಸಮರ್ಥಿಸಿಕೊಂಡರು. ಭಾರತೀಯ ಸಂವಿಧಾನದಲ್ಲಿ ದಲಿತರಿಗೆ ವಿಶೇಷ ಸೌಲಭ್ಯಗಳ ಅವಕಾಶ ಮಾಡಿಕೊಟ್ಟು, ಶತಶತಮಾನಗಳಿಂದ ದಲಿತರಿಗಾಗಿರುವ ಸಾಮಾಜಿಕ ಅನ್ಯಾಯವನ್ನು ಸರಿಪಡಿಸಲು ಪ್ರಯತ್ನಿಸಿದರು. ಇದರಿಂದ ದಲಿತರಿಗೆ ಹಿಂದೂ ಧರ್ಮದಲ್ಲಿಯೇ ಇದ್ದುಕೊಂಡು ಆತ್ಮಗೌರವದಿಂದ ಬದುಕುವ ಸಾಧ್ಯತೆಗಳ ಕಡೆ ಅರಿವು ಮೂಡಲು ಸಾಧ್ಯವಾಯಿತು.

ಅಂಬೇಡ್ಕರರ ನಂತರ ಅಲ್ಪಸಂಖ್ಯೆಯಲ್ಲಿ ದಲಿತರು ಬೌದ್ಧ ಧರ್ಮಕ್ಕೆ ಸೇರಿದರು. ೧೯೯೦ರಲ್ಲಿ ವಿ.ಪಿ.ಸಿಂಗ್ ನೇತೃತ್ವದ ಕೇಂದ್ರ ಸರ್ಕಾರವು ಬೌದ್ಧಧರ್ಮ ಸೇರಿದ ದಲಿತರಿಗೂ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿತು. ದಲಿತ ರಾಜಕಾರಣಿಗಳು, ಲೇಖಕರು, ಸಾಹಿತಿಗಳು, ಚಳುವಳಿಗಾರರು, ಬೌದ್ಧಧರ್ಮದ ಕಡೆಗೆ ಒಲವು ತೋರಿದರೂ ಧರ್ಮಾಂತರ ಹೊಂದುವ ಅಪೇಕ್ಷೆಯನ್ನು ವ್ಯಕ್ತಪಡಿಸುವುದಿಲ್ಲ. ಏಕೆಂದರೆ ಮೀಸಲಾತಿ ವ್ಯವಸ್ಥೆಯಿಂದ ಬೌದ್ಧಧರ್ಮ ಸೇರಿದವರಲ್ಲಿಯೂ ಜಾತಿವ್ಯವಸ್ಥೆ ಉಳಿದಂತಾಗುತ್ತದೆ. ಇದರಿಂದ ಬೌದ್ಧರಲ್ಲೂ ಜಾತಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಂತಾಗುತ್ತದೆ. ಹೀಗಾಗದೆ ಬೌದ್ಧಧರ್ಮ ಸೇರಿದ ನಂತರ ಅವರಲ್ಲಿ ಸ್ವಾವಲಂಬನೆ ಉಂಟಾಗಬೇಕು.

## ಉಪಸಂಹಾರ

ಇಂದಿನ ದಿನಗಳಲ್ಲಿ ಅಹಿಂಸೆ ಚರ್ಚೆಗಳಲ್ಲಿ, ವೇದಿಕೆಗಳಲ್ಲಿ ಬಳಸುವ ಮುಖ್ಯ ಪದವಾಗಿದೆ. ಹಿಂಸೆಯನ್ನು ಉದ್ದೀಪಿಸುವ

ಗುಣಗಳು ಮನುಷ್ಯನ ರಕ್ತದಲ್ಲಿ ಇರುವುದಾದರೆ ಹಿಂಸಾವಾದಿಗಳನ್ನು ಜರೆಯುವುದರಲ್ಲಿ ಯಾವುದೇ ಅರ್ಥವಿಲ್ಲ ಎಂಬ ಘೋಷ ವಾಕ್ಯವೂ ಹುಟ್ಟಿಕೊಂಡಿದೆ. ಉಳಿದ ಜೀವಿಗಳಲ್ಲಿಲ್ಲದ ಪ್ರೀತಿ, ತ್ಯಾಗ, ದಯೆ ಸಹಾನುಭೂತಿ ಮಾನವನಲ್ಲಿ ಇರುತ್ತವೆ. ಅವನಲ್ಲಿ ಕೆಲವು ಮೃಗೀಯ ಗುಣಗಳೂ ಇರುತ್ತವೆ. ಅವುಗಳಲ್ಲಿ ಹಿಂಸೆ ಒಂದು. ಹಿಂಸೆಯನ್ನು ಮನುಷ್ಯ ಬೆಳೆಸಿಕೊಂಡರೆ ಅದು ಸಂಸ್ಕೃತಿಯ ವಿಕಾಸಕ್ಕೆ ವಿರುದ್ಧವಾದ್ದರಿಂದ ಹಿಂಸೆಯನ್ನು ವಿರೋಧಿಸಬೇಕು.

ಜಗತ್ತಿನಲ್ಲಿ ಯುದ್ಧಪರ ರಾಷ್ಟ್ರಗಳೂ ಇವೆ. ಹಾಗೇ ಯುದ್ಧವನ್ನು ವಿರೋಧಿಸುವ ರಾಷ್ಟ್ರಗಳೂ ಇವೆ. ಅಹಿಂಸೆಯ ಬಗ್ಗೆ ಜನರು ಇನ್ನೂ ಒಲವು ತೋರುತ್ತಿರುವುದರಿಂದ ಜಗತ್ತು ಇನ್ನೂ ಉಳಿದಿದೆ. ದುಃಖ, ಹಿಂಸೆ, ದ್ವೇಷ, ಅಸೂಯೆ ಮುಂತಾದ ಬದುಕಿನ ವಿಷಮತೆಗಳಿಂದ ಪಾರಾಗುವುದು ಹೇಗೆ ಎಂಬುದು ಬುದ್ಧನ ಮುಖ್ಯ ಕಾಳಜಿಯಾಗಿತ್ತು. ಆದರೆ ತಾನು ಹೇಳಿದ್ದೇ ಸರಿ, ಅದೇ ಕಡೆಯ ಮಾತು ಎನ್ನದೆ, ನಾನು ಹೇಳುವುದನ್ನೂ ಒಪ್ಪಬೇಕಿಲ್ಲ, ಪರೀಕ್ಷಿಸಿ ನೋಡಿ ಎಂದ. ಹಿಂಸೆ, ದ್ವೇಷ, ದೌರ್ಜನ್ಯ, ಭಯೋತ್ಪಾದನೆ, ಅಶಾಂತಿಗಳು ತುಂಬಿ ತುಳುಕುತ್ತಿರುವ ಇಂದಿನ ಪ್ರಪಂಚಕ್ಕೆ ಬುದ್ಧನ ತಾರಕ ಸಂದೇಶ ಅತ್ಯಂತ ಪ್ರಸ್ತುತವಾದದ್ದು.

## ನಿರ್ವಾಣ ಎಂದರೇನು?

**ಮಹಾಕವಿ ಕುವೆಂಪು ಅವರ 'ಬುದ್ಧದೇವ' ಕವಿತೆ ಹೀಗೆ ಪ್ರಾರಂಭವಾಗುವುದು:**

ವಿಕಸಿತ ಸಹಸ್ರದಲ ಪದ್ಮಪೀಠದ ಮೇಲೆ
ಮಂಡಿಸಿಹ ಧವಲಿಮಾ ಧ್ಯಾನಸ್ಮಿತ ಮೂರ್ತಿ,
ಹೇ ಬುದ್ಧದೇವ, ನಿನ್ನತುಲ ಬುದ್ಧಿ ಸ್ಫೂರ್ತಿ
ಮಾನವನ ಮೂರ್ಖತೆಯ ದಹಿಸುವ ಮಹಾಜ್ವಾಲೆ.
ಹೇ ಪುಣ್ಯಮತಿಮೂರ್ತಿ, ಮತದ ಮತಿಹೀನತೆಯು
ಸಾಕೆಮಗೆ; ಬೇಕು ಸನ್ಮತಿಯ ನಾಗರಿಕತೆಯು;
ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ?

ವೈಶಾಖ ಶುದ್ಧ ಪೂರ್ಣಿಮೆ ಎಂದ ಕ್ಷಣ ಬುದ್ಧ ನಮಗೆ ನೆನಪಾಗುತ್ತಾನೆ. ಈ ಪೂರ್ಣಿಮೆ ಜ್ಞಾನೋದಯದ ಸಂಕೇತ. ಬುದ್ಧ ಜನಿಸಿದ್ದು, ಬೋಧಿಯನ್ನು ಹೊಂದಿದ್ದು, ಮಹಾಪರಿನಿರ್ವಾಣ ಪಡೆದದ್ದು, ಈ ಹುಣ್ಣಿಮೆಯ ದಿನದಂದು. ಬುದ್ಧನ ಸಮಗ್ರ ವ್ಯಕ್ತಿತ್ವ ಹುಣ್ಣಿಮೆಯಂಥ ಪ್ರಶಾಂತತೆ, ಬೆಳದಿಂಗಳಿನಂಥ ಶುದ್ಧತೆ, ವೈಶಾಖ ಮಾಸದ ಸೃಜನಶೀಲತೆಯಿಂದ ಕೂಡಿದೆ.

ಅರಮನೆಯ ಸುಖಕ್ಕಿಂತ, ಮಗ್ಗುಲಲ್ಲಿರುವ ಮಡದಿ–ಮಗುವಿಗಿಂತ ಮಿಗಿಲಾಗಿ 'ಸುಖ' ಬೇರೆ ಇದೆ ಎಂದು ಸಿದ್ಧಾರ್ಥನಿಗೆ ಅನ್ನಿಸಿ, ಆ ಅನಿಸಿಕೆಯ ತೀವ್ರತೆಯಿಂದ ಅರ್ಧರಾತ್ರಿಯಲ್ಲಿ ಎಲ್ಲರೂ ನಿದ್ರಿಸುವ ಸಮಯದಲ್ಲಿ ತನ್ನ ನಿದ್ರೆಯನ್ನು ತೊರೆದು ನಿಜವಾದ ಶಾಂತಿಯನ್ನು ಅರಸುತ್ತ ಹೋದನು. ಸುತ್ತಲಿನವರ ದುಃಖಕ್ಕೆ ಪರಿಹಾರ ಏನು ಎಂದು ಏಕಾಗ್ರವಾಗಿ ಚಿಂತಿಸಿದನು. ಈ ಚಿಂತೆಯ ಪರಿಹಾರದ ಭಾಗವಾಗಿ ತಾನೇ ಚಿಂತನೆಯ ವಸ್ತುವಾಗಿ ಸಿದ್ಧಾರ್ಥನ ಪಟ್ಟದಿಂದ ಗೌತಮ ಬುದ್ಧನಾಗಿ, ವೃಕ್ಷದಡಿಯಲ್ಲಿ ಕುಳಿತು ತಾನೇ ವೃಕ್ಷವಾದ. ತನ್ನನ್ನೇ ಪ್ರಯೋಗಶೀಲತೆಗೆ ಒಡ್ಡಿಕೊಂಡನು. ತನಗೆ ಅನಿಸುತ್ತಿದ್ದುದನ್ನು ಪ್ರಮಾಣಿಸಿ ನೋಡಿ, ವಿಮರ್ಶೆಗೆ ಹಚ್ಚಿ, ಒಳನೋಟದಿಂದ ಸತ್ಯವನ್ನು ನೋಡಲು



ಸಾಂಚಿಯ ಬೌದ್ಧ ಸ್ತೂಪ

ಹೊರಗಣ್ಣನ್ನು ಮುಚ್ಚಿ, ಜ್ಞಾನದ ಸಾಕ್ಷಾತ್ಕಾರ ಹೊಂದಿದನು, ಬುದ್ಧನಾದನು. ಆಹಾರವನ್ನು ತ್ಯಜಿಸಿದರೆ ಕೃಶದೇಹದಿಂದ ಸಾಧಕನಾಗಲು ಸಾಧ್ಯವಿಲ್ಲವೆಂದು ಪ್ರಾಣ ಹಿಡಿದುಕೊಳ್ಳಲು ಆಹಾರವನ್ನೂ ಒಪ್ಪಿಕೊಂಡ. ಆಸೆ ದುಃಖಕ್ಕೆ ಮೂಲ ಎಂಬುದು ಬುದ್ಧನ ಅಂತರಂಗದ ಮಾತು. ಬುದ್ಧ ಪ್ರತಿಪಾದಿಸಿದ ನಾಲ್ಕು ಉದಾತ್ತ ಸತ್ಯಗಳೆಂದರೆ ದುಃಖ, ಅದರ ಕಾರಣ, ಅದನ್ನು ಕೊನೆಗೊಳಿಸುವ ಸಾಧ್ಯತೆ ಮತ್ತು ಆ ಬಗೆಗಿನ ದಾರಿ. ಸ್ವರ್ಗ, ನರಕ, ಮೋಕ್ಷಗಳನ್ನು ನಿರಾಕರಿಸಿದ ಈತ ನಿರ್ವಾಣವನ್ನು ಎತ್ತಿಹಿಡಿದ. ಎಲ್ಲ ಕಾಮನೆಗಳ ಸಂಪೂರ್ಣ ನಿರಸನವೇ ನಿರ್ವಾಣ. ಅದರಿಂದ ಲಭಿಸುವ ಸುಖಶಾಂತಿಗಳೇ ನಿರ್ವಾಣ ಎಂದ.